**(ದಿನಾಂಕಃ 16.06.2026 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು)**

<u>ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಾದ ಶ್ರೀ ವೈ.ಪಿ.ಎಂ ರವರಿಂದ ಃ-</u>

1. ನಾನು ಈ ಪ್ರಕರಣವನ್ನು ಹೊರತುಪಡಿಸಿ ವಾದಿ ಮೇಲೆ ಬೇರೆ ಯಾವುದೇ ಪ್ರಕರಣವನ್ನು ದಾಖಲಿಸಿರುವುದಿಲ್ಲ. ಕೆ.ಎ 14 ಬಿ 3106 ವಾಹನವು ಪ್ರತಿವಾದಿ 1 ರವರ ಹೆಸರಿನಲ್ಲಿ ಇರುತ್ತದೆ ಎಂದು ಸೂಚಿಸಿದರೆ ಸರಿ. ಸದರಿ ವಾಹನ ಪ್ರತಿವಾದಿ 1 ರವರ ಸ್ವಾಧೀನದಲ್ಲಿ ಇರುತ್ತದೆಯಾ ಎಂಬ ಪ್ರಶ್ನೆಗೆ ಸಾಕ್ಷಿಯು ಅವರು ತೆಗೆದುಕೊಂಡು ಹೋಗಿರುತ್ತಾರೆ ಎಂದು ನುಡಿಯುತ್ತಾರೆ. ಸುಮಾರು 2022-23 ನೇ ಸಾಲಿನಲ್ಲಿ ಪ್ರತಿವಾದಿ 1 ರವರು ಸದರಿ ವಾಹನವನ್ನು ತೆಗೆದುಕೊಂಡು ಹೋಗಿರುತ್ತಾರೆ.

2. ನಾನು ವಾಹನದ ಹರಾಜು ಮತ್ತು ಟೆಂಡರ್ ಗೆ ಸಂಬಂಧಪಟ್ಟ ದಾಖಲೆಗಳನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತೇನೆ. ನಾನು ಸದರಿ ವಾಹನವನ್ನು 1,21,000/- ಗೆ ಹರಾಜು ಹೇಳಿರುತ್ತೇನೆ. ನನಗೆ ಯಾವ ದಿನಾಂಕದಂದು ಹರಾಜಿನಲ್ಲಿ ಹಿಡಿದ ಹಣವನ್ನು ತುಂಬಿರುತ್ತೇನೆ ಎಂದು ಈಗ ನೆನಪಿರುವುದಿಲ್ಲ.

3. ನಾನು ಸದರಿ ವಾಹನವನ್ನು ಪ್ರತಿವಾದಿ 2 ರವರ ಬ್ಯಾಂಕಿನ ಹತ್ತಿರ ನೋಡಿರುತ್ತೇನೆ. ನಾನು ಆ ದಿನ ಸ್ವಲ್ಪ ಹಣವನ್ನು ಕಟ್ಟಿದ್ದು ಆದರೆ ವಾಹನವನ್ನು ತೆಗೆದುಕೊಂಡು ಹೋಗಿರುವುದಿಲ್ಲ. ನಾನು ಪೂರ್ತಿ ಹಣವನ್ನು ಯಾವಾಗ ತುಂಬಿರುತ್ತೇನೆ ಎಂದು ನೆನಪಿರುವುದಿಲ್ಲ.

4. ನಾನು ಪೂರ್ತಿ ಹಣವನ್ನು ತುಂಬಿದ ನಂತರ ವಾಹನವನ್ನು ತೆಗೆದುಕೊಂಡು ಹೋಗಿರುತ್ತೇನೆ. ನಾನು ಸದರಿ ವಾಹನವನ್ನು ತೆಗೆದುಕೊಂಡು ಹೋಗುವಾಗ ಸೂಕ್ತವಾದ ದಾಖಲೆಗಳನ್ನು ತೆಗೆದುಕೊಂಡು ಹೋಗಿರುವುದಿಲ್ಲ. ನಾನು ಸದರಿ ವಾಹನವನ್ನು ಸುಮಾರು 6 ತಿಂಗಳು ಇಟ್ಟುಕೊಂಡಿರುತ್ತೇನೆ. ಸದರಿ ಆರು ತಿಂಗಳ ಅವಧಿಯಲ್ಲಿ ಪ್ರತಿವಾದಿ 2 ರವರು ಸದರಿ ವಾಹನದ ಆರ್.ಸಿ ಪುಸ್ತಕ ವರ್ಗಾವಣೆ ಮಾಡಿರುವುದಿಲ್ಲ.

5. ನಾನು ನನ್ನ ಹೆಸರಿನಲ್ಲಿ ಸದರಿ ವಾಹನವನ್ನು ವರ್ಗಾವಣೆ ಮಾಡದೇ ಇರುವುದರಿಂದ ಪ್ರತಿವಾದಿ 2 ರವರ ವಿರುದ್ಧ ಕಾನೂನಿನ ಕ್ರಯ ಕೈಗೊಂಡಿರುವುದಿಲ್ಲ. ಪ್ರತಿವಾದಿ 1 ರವರು ಸದರಿ ಸಾಲದ ಹಣವನ್ನು ಕಟ್ಟಿಕೊಂಡು ತಾನೇ ತೆಗೆದುಕೊಂಡು ಹೋಗಿರುತ್ತಾರೆ ಎಂದು ಸೂಚಿಸಿದರೆ ಸರಿಯಲ್ಲ.

6. ನಾನು ಮತ್ತು ಪ್ರತಿವಾದಿ 2 ರವರು ಚೆನ್ನಾಗಿ ಇರುವುದರಿಂದ ಪ್ರತಿವಾದಿ 1 ರವರ ವಿರುದ್ಧ ಈ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ನಾನು ನ್ಯಾಯಾಲಯದ ಮುಂದೆ ನನ್ನ ದಾವೆಗೆ ಸಂಬಂಧಪಟ್ಟಂತೆ ಯಾವುದೇ ಸೂಕ್ತವಾದ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದು ಸೂಚಿಸಿದರೆ ಸರಿಯಲ್ಲ.

7. ಪ್ರತಿವಾದಿ 1 ರವರು ನನ್ನ ವಾಹನವನ್ನು ತನ್ನ ಹೆಂಡತಿಗೆ ಹುಷಾರಿರುವುದಿಲ್ಲ ಎಂದು ಹೇಳಿ ತೆಗೆದುಕೊಂಡು ಹೋಗಿರುತ್ತಾರೆ. ನಾನು ವಾಪಸ್ಸು ಗಾಡಿಯನ್ನು ಪ್ರತಿವಾದಿ 1 ರವರಿಗೆ ಕೇಳಿದಾಗ ಗಾಡಿಯನ್ನು ನನ್ನ ಹೆಸರಿನಲ್ಲಿ ವರ್ಗಾವಣೆ ಮಾಡಿಕೊಳ್ಳಲು ತೆಗೆದುಕೊಂಡು ಹೋಗಿರುತ್ತೇನೆ ಎಂದು ನುಡಿಯುತ್ತಾರೆ.

8. ನಾನು ಪ್ರತಿವಾದಿ 1 ರವರ ವಿರುದ್ಧ ದಾವಾ ಆಸ್ತಿಯ ವಿಚಾರವಾಗಿ ಹೊಸನಗರ ಪೋಲಿಸ್ ಠಾಣೆಯಲ್ಲಿ ದೂರನ್ನು ದಾಖಲಿಸಿರುತ್ತೇನೆ. ಪ್ರತಿವಾದಿ 1 ರವರು ಸಾಲವನ್ನು ತುಂಬಿದ ನಂತರವು ವಾಹನವನ್ನು ಮರುಪಾವತಿಸದೇ ಇರುವುದಕ್ಕೆ ಪ್ರತಿವಾದಿ 2 ರವರ ವಿರುದ್ಧ ದಾವೆಯನ್ನು ಸಲ್ಲಿಸಿದ ವಿಚಾರ ನನೆಗ ಗೊತ್ತಿರುವುದಿಲ್ಲ. ನನಗೆ ಸದರಿ ವಿಷಯ ಗೊತ್ತಿದ್ದರೂ ಸಹ ಗೊತ್ತಿರುವುದಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

9. ನಾನು ಸದರಿ ಪ್ರಕರಣದಲ್ಲಿ ಪಕ್ಷಗಾರನ್ನಾಗಿ ಇರಬೇಕು ಎಂದು ನಮ್ಮ ವಕೀಲರ ಮೂಲಕ ಅರ್ಜಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸಾಕ್ಷಿಯು ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ.

(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಮುಂದೂಡಲಾಯಿತು.)

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸ. ಎಂ. ಒ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಹೊಸನಗರ.